**ಸಾಕ್ಷಿಯನ್ನು ದಿನಾಂಕ *09.09.2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನಾನು ಈ ಹಿಂದೆ ನ್ಯಾಯಾಲಯದ ಮುಂದೆ ಸಾಕ್ಷಿ ಹೇಳಿದ್ದ ಬಗ್ಗೆ ನನಗೆ ಜ್ಞಾಪಕದಲ್ಲಿ ಇರುತ್ತದೆ. ನಾನು ಈ ದಿನ ನ್ಯಾಯಾಲಯಕ್ಕೆ ಚಂದನ್ ಅವರ ಅಣ್ಣ ಚೇತನ್ ಜೊತೆಯಲ್ಲಿ ಬಂದಿರುತ್ತೇನೆ ಎಂದರೆ ಸರಿ. ಚೇತನ್ ಜೊತೆಯಲ್ಲಿ ಅಮೃತ್ ಸಹ ಬಂದಿರುತ್ತಾರೆ ಎಂದರೆ ಸರಿ. ನಾನು, ಅಮೃತ್ ಮತ್ತು ಚೇತನ್ ಪೊಲೀಸರ ಜೊತೆಯಲ್ಲಿ ಈ ದಿನ ನ್ಯಾಯಾಲಯದಲ್ಲಿ ಏನು ಸಾಕ್ಷಿ ಹೇಳಬೇಕು ಎಂದು ಮಾತನಾಡುತ್ತಿದ್ದೆವು ಎಂದರೆ ಸರಿಯಲ್ಲ. ಚೇತನ್ ಅವರು ಈ ದಿನ ನ್ಯಾಯಾಲಯದಲ್ಲಿ ಏನು ಹೇಳಬೇಕು ಎನ್ನುವುದನ್ನು ಹೇಳಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಚಂದನ್ ಗಾಯಾಳು ಇರುವುದರಿಂದ ಅವರ ಅಣ್ಣ ಚೇತನ್ ಈ ದಿನ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಹೊಸಹಳ್ಳಿ ಗ್ರಾಮ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಇರುತ್ತದೆ. ನನಗೆ ಪೊಲೀಸರು ಲಿಖಿತ ನೋಟೀಸ್ ಅನ್ನು ಕೊಟ್ಟಿದ್ದರು. ನಾನು ಪೊಲೀಸರು ನನಗೆ ನೋಟೀಸ್ ಕೊಡುವ ವೇಳೆಲಯಲ್ಲಿ ಚಂದನ್ ಜೊತೆಯಲ್ಲಿ ಇದ್ದೆ. ನಾನು ಮತ್ತು ಚಂದನ್ ಸ್ನೇಹಿತರು ಇರುವುದರಿಂದ ನನ್ನನ್ನು ಪೊಲೀಸರು ಕರೆಸಿಕೊಂಡಿದ್ದರು ಎಂದರೆ ಸರಿ. ಪೊಲೀಸರು ಆ ದಿನ ಹಸಿರು ಬಣ್ಣದ ಶರ್ಟು, ಬ್ಲೂ ಕಲರ್ ಜೀನ್ಸ್ ಪ್ಯಾಂಟ್ , ಬ್ಲ್ಯಾ ಕಲರ್ ಮಾಸ್ಕ್ ಅನ್ನು ಅಮಾನತ್ತು ಪಡಿಸಿಕೊಂಡಿದ್ದರು. ನಾನು ನನ್ನ ಹಿಂದಿನ ಮುಖ್ಯ ವಿಚಾರಣೆಯಲ್ಲಿ ಬಣ್ಣ

ಹೇಳಿರುವುದಿಲ್ಲ. ನಾನು ಈ ಹಿಂದೆ ನ್ಯಾಯಾಲಯದ ಮುಂದೆ ಸಾಕ್ಷಿ ಹೇಳುವಾಗ ಷರ್ಟು ಹಾಫ್ ಷರ್ಟ್ ಅಥವಾ ತುಂಬು ತೋಳಿನ ಷರ್ಟು ಎಂದು ಹೇಳಿರಲಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಆ ದಿನ ನಾನು ನೋಡಿದ್ದೆ ಎನ್ನುವ ಗ್ರೀನ್ ಷರ್ಟ್ ಲೈಟಾಗಿತ್ತಾ, ಡಾರ್ಕ್ ಆಗಿತ್ತಾ, ಹೊಳೆಯುತ್ತಿತ್ತಾ ಎನ್ನುವ ಬಗ್ಗೆ ಹೇಳಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಆ ದಿನ ನೋಡಿದಂತಹ ಷರ್ಟ್ ನೆಕ್ ಷರ್ಟ್ ಅಥವಾ ತುಂಬು ತೋಳಿನ ಷರ್ಟ್ ಮತ್ತು ಟೀ ಷರ್ಟ್ ಅಂತಹ ಷರ್ಟ್ ಎಂದು ಹೇಳಿರುವುದಿಲ್ಲ. ನಾನು ಆ ದಿನ ನೋಡಿದಂತಹ ಗ್ರೀನ್ ಷರ್ಟೇ ಎಂದು ಗುರುತು ಇಟ್ಟುಕೊಂಡಿರುವುದಿಲ್ಲ. ಆ ರೀತಿ ಷರ್ಟುಗಳು ಸಾಮಾನ್ಯವಾಗಿ ಬಟ್ಟೆ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ನೋಡಿದಂತಹ ಬ್ಲೂ ಕಲರ್ ಜೀನ್ಸ್ ಪ್ಯಾಂಟ್ ಸ್ಕೈಕಲರ್ ಆ, ಲೈಟ್ ಬ್ಲೂ ಕಲರ್ ಅಂತ ಹೇಳಿರುವುದಿಲ್ಲ. ನಾನು ಮಹಜರ್ ಕಾಲಕ್ಕೆ ಇರಲಿಲ್ಲ, ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ನನ್ನ ಸ್ನೇಹಿತ ಇರುವುದರಿಂದ ಮತ್ತು ಗಾಯಾಳು ಇರುವುದರಿಂದ ಆತನ ಕೇಸಿಗೆ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನೊಟೀಸ್ ಅನ್ನು ನನಗೆ ಎಷ್ಟು ಗಂಟೆಗೆ ಕೊಟ್ಟರು ಎನ್ನುವ ಬಗ್ಗೆ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ನಾನು ಯಾವುದೇ ಮಹಜರ್ ಗೆ ಸಹಿ ಹಾಕದೇ ಇದ್ದರೂ ಸಹ ನನ್ನ ಸ್ನೇಹಿತನಿಗೆ ಅನುಕೂಲವಾಗಲಿ

ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜೀನ್ಸ್ ಪ್ಯಾಂಟ್ ನಂತವುಗಳು ಸಹ ಬಟ್ಟೆ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸರಿ.

**ಮರು ವಿಚಾರಣೆಃ– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

**ಓ ಹೇ ಕೇ ಸ ಇ ಎ ಒ.,**

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
**ಮೈಸೂರು**